ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಕ್ಫ್‌ವತಿಯಿಂದ ಕೈಗೊಂಡ ಕಾಮಗಾರಿಗಳು.

2945:(3979)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1994 ರ ಡಿಸೆಂಬರ್‌ನಿಂದ ಈವರೆಗೆ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಕ್ಫ್‌ವತಿಯಿಂದ ವಿವಿಧ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಕಾರ್ಯಕ್ರಮಗಳಿಗೆ, ಯೋಜನೆಗಳಿಗೆ ಖರ್ಚು ಮಾಡಿರುವ ಹಣವೆಷ್ಟು?

(ಆ) ಹಾಲಿ ಚಾಲ್ತಿಯಲ್ಲಿರುವ ಹಾಗೂ ಬಾಕಿ ಇರುವ ಕಾರ್ಯಕ್ರಮಗಳು,ಕಾಮಗಾರಿಗಳು ಯಾವುವು; ಇವುಗಳ ಒಟ್ಟು ವೆಚ್ಚವೆಷ್ಟು; ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

(ಅ) 1994ರ ಡಿಸೆಂಬರ್‌ನಿಂದ ಇಲ್ಲಿಯವರೆಗೆ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಅನೇಕ ವಕ್ಫ್ ಆಸ್ತಿಗಳ ರಿಪೇರಿ, ಜೀರ್ಣೋದ್ಧಾರ ಮತ್ತು ಕಟ್ಟಡ ಕಟ್ಟುವ ಸಲುವಾಗಿ ಗ್ರಾಂಟ್-ಇನ್-ಏಯ್ಡ್ ಯೋಜನೆಯಡಿಯಲ್ಲಿ 6,40,000-00 ರೂ.ಗಳನ್ನು ಖರ್ಚು ಮಾಡಲಾಗಿದೆ.

(ಆ) ಈಗ ಚಾಲ್ತಿಯಲ್ಲಿರುವ ಅನುದಾನ ಯೋಜನೆ ಮಾತ್ರ ಇರುತ್ತದೆ. ಮಾಗಡಿ ತಾಲ್ಲೂಕಿನಲ್ಲಿರುವ ಈ ಕೆಳಕಂಡ 5 ಇತರೆ ವಕ್ಫ್ ಸಂಸ್ಥೆಗಳಿಗೆ ಒಟ್ಟು ಅನುದಾನ ರೂ. 1,05,000-00ಗಳನ್ನು ಚಾಲ್ತಿಯಲ್ಲಿರುವ ಯೋಜನೆಯಡಿಯಲ್ಲಿ ಮಂಜೂರಾಗಿರುತ್ತದೆ. ಸದರಿ ಕೆಲಸಗಳಿಗೆ ಹಣ ಮಂಜೂರಾಗಿ, ಬಿಡುಗಡೆಯಾದಂತೆ ಉಳಿದ ಕೆಲಸಗಳು ಪೂರ್ಣಗೊಳ್ಳುತ್ತದೆ.

1. ಹಜರತ್ ಗುಲಾಂ ಹುಸೇನ್ ಖಾದ್ರಿ ಸಾಮಂತದುರ್ಗಾ, ಮಾಗಡಿ ತಾಲು

2. ಅಹ್ಲೆ ಸುನ್ನತುಲ್ ಜಮಾತ್ ಜಾಮಿಯಾ ಮಸೀದಿ, ಗುಡೇಮಾರನಹಳ್ಳಿ ಮಾಗಡಿ

3. ಜಾಮಿಯಾ ಮಸೀದಿ, ಮಂಚನಬೆಲೆ ಗ್ರಾಮ, ಮಾಗಡಿ ತಾಲ್ಲೂಕು

4. ಜಾಮಿಯಾ ಮಸೀದಿ, ಮಾಯಸಂದ್ರ ಗ್ರಾಮ, ಮಾಗಡಿ ತಾಲ್ಲೂಕು

5. ಇದ್ಗಾ, ಬಿಸ್ಕೂರು ಗ್ರಾಮ, ಕುದೂರು ಹೋಬಳಿ, ಮಾಗಡಿ ತಾಲ್ಲೂಕು.

ಹಿರೇಕೆರೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ

2947:(4051)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವಾಗಿನಿಂದ ಬಾಕಿ ಉಳಿದಿದೆ;

ಆ) ಹಾಗಿದ್ದಲ್ಲಿ ಯಾವಾಗ ವಿದ್ಯುತ್ ಸಂಪರ್ಕಕೊಡಲಾಗುವುದು?

ಇಂಧನ ರಾಜ್ಯ ಸಚಿವರು:

ಅ ಮತ್ತು ಆ) ಹಿರೇಕೆರೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕೆಲಸಗಳು ಸ್ವಲ್ಪ ಮಟ್ಟಿಗೆ ಕುಂಠಿತವಾಗಿರುವುದು ಮಂಡಳಿಯ ಗಮನಕ್ಕೆ ಬಂದಿದೆ. ಹಾಲಿ ಹಿರೇಕೆರೂರು ತಾಲ್ಲೂಕಿನ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕುರಿತಂತೆ ವಿವರಗಳು ಕೆಳಕಂಡಂತಿವೆ.

ಬೇಟಕೆಕೂರಿನಲ್ಲಿ - ಕೆಲಸ ಮುಗಿದಿದೆ.

ಅನಜ ಮತ್ತು ಅಡೆವು:- ಈ ಯೋಜನೆಗಳಿಗೆ ಡಿಸೆಂಬರ್ ಹಾಗೂ ನವೆಂಬರ್ 95ರಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದರೂ, ಅರ್ಜಿದಾರರು ಮಂಡಳಿಯ ನಿಯಮಗಳನ್ನು ಪಾಲಿಸಿರುವುದು ಏಪ್ರಿಲ್ 98ರಲ್ಲಿ. ನಿಯಮಗಳ ಪ್ರಕಾರ ಕರಾರುಪತ್ರ ಇತ್ಯಾದಿಗಳನ್ನು ಸಲ್ಲಿಸಿದ ತಕ್ಷಣ ಕಾರ್ಯಾದೇಶಗಳನ್ನು ಏಪ್ರಿಲ್-96ರಲ್ಲೆ ಕೊಡಲಾಗಿದೆ. ಅಡವು ಗ್ರಾಮದಲ್ಲಿ ಯೋಜನೆಯ ಕೆಲಸಗಳು ಪ್ರಗತಿಯಲ್ಲಿದೆ. ಅನಜ ಗ್ರಾಮದಲ್ಲಿನ ಯೋಜನೆಯ ಕೊಳವೆ ಬಾವಿಯು ನಿಶ್ಫ್ರಿಯವಾಗಿದ್ದು, ಎರಡನೇ ಬಾರಿ ಬಾವಿಯನ್ನು ಕೊರೆಸಲಾಗಿ, ಈಗ ಫಲಕಾರಿಯಾಗಿದೆ. ಆದರೆ ಬೆಳೆಗಳು ಬೆಳೆದು ನಿಂತಿರುವುದರಿಂದ ಅಲ್ಲಿಯ ಜನರ ತಕರಾರಿನಿಂದ ಈ ಬೆಳೆಗಳು ಕಟಾವು ಆದ ನಂತರ, ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.